# ಪ್ರೇಮ ಬರಹ ನೂರು ತರಹ

ಯಾವ ಕಾಲಕ್ಕೂ ಬತ್ತದೆ ನಿರಂತರ ಹರಿವ ತಮ್ಮ ಪ್ರೇಮದ ತೊರೆಯ ಬಿಂಬಗಳನ್ನು ಮರಗಿಡಗಳ ಮೇಲೆ ತರುಣ ತರುಣಿಯರು ಮೂಡಿಸುತ್ತಾರೆ. ಆ ಬರಹಗಳು ಪ್ರೇಮದ ತೀವ್ರತೆಯನ್ನೂ ಮಾಂತ್ರಿಕತೆಯನ್ನೂ ಸೂಚಿಸುವುದರ ಜೊತೆಗೆ, ಮಧುರಕ್ಷಣವೊಂದನ್ನು ಅ'ಮರ'ವಾಗಿಸುವ ಪ್ರಯತ್ನಗಳೂ ಆಗಿರುತ್ತವೆ.

■ ನಿಂಗಪ್ಪ ಮುದೇನೂರು



'ಪ್ರೇಮ ಬರಹ ಕೋಟಿ ತರಹ' ಎಂದು ಹಾಡು ಬರೆದ ಸಿನಿಮಾ ಸಾಹಿತಿಗೆ ಪ್ರೇಮ ಎನ್ನುವುದು ಒಂದು ನಶೆಯಲ್ಲ, ಅದು ಶುದ್ಧ ಅಂತರಂಗದ ಪಿಸುಮಾತು ಎನ್ನುವುದು ತಿಳಿದಿದೆ. ಲವ್ ಫೇಲ್ ಆದಾಗ, ಪ್ರೀತಿಸಿದ ಹುಡುಗಿ ಇನ್ನೊಬ್ಬ ಹುಡುಗನನ್ನು ಆಯ್ಕೆಮಾಡಿಕೊಂಡಾಗ, ಭಗ್ನಪ್ರೇಮದ ವೇದನೆ ಹೇಗಿರುತ್ತದೆ ಎಂಬುದಕ್ಕೆ ಒಂದು ಕಾಲದಲ್ಲಿ ನೋಡುಗರ ಎದೆಗೆ ಪ್ರೀತಿಯ ಹೂಬಾಣಗಳ ಬಿಟ್ಟು ಹುಚ್ಚುಹಿಡಿಸಿದ ರವಿಚಂದ್ರನ್ ಸಿನಿಮಾಗಳನ್ನು ನೆನಪಿಸಿಕೊಳ್ಳಬೇಕು. 'ಪ್ರೇಮಲೋಕ', 'ರಣಧೀರ', 'ಅಂಜದಗಂಡು', 'ಹಳ್ಳಿಮೇಷ್ಟ್ರು', 'ಬಣ್ಣದಗೆಜ್ಜೆ', 'ರಾಮಾಚಾರಿ'ಯಂತಹ ಸಿನಿಮಾಗಳನ್ನು ನೋಡಿದರೆ ಹುಡುಗ ಹುಡುಗಿಯರಷ್ಟೇ ಅಲ್ಲ, ವಯಸ್ಸಾದವರೂ ಕೂಡ ಆರಂಭದ ಅ ಆ ಇ ಈ ಕಲಿಯುವವರಂತೆ ಬೆರಗಾಗುತ್ತಿದ್ದರು! ಕೈಮೇಲೆ ತಮಗಿಷ್ಟದ ಸಿನಿಮಾ ಹೆಸರು ಹಾಗೂ ರವಿಮಾಮನ ಹೆಸರಿನ 'ಹಚ್ಚೆ' ಹಾಕಿಸಿಕೊಂಡು ಓಡಾಡಿದವರನ್ನು ನಾನು ಕಂಡಿದ್ದೇನೆ. ಇನ್ನು ಜಾತ್ರಾ ಬಂಡಿ, ಟ್ರ್ಯಾಕ್ಟರ್ ತುಂಬೆಲ್ಲಾ ಪ್ರೇಮಲೋಕದ ಬರಹ–ಪೋಸ್ಟರ್–ಹಾಡುಗಳನ್ನು ಹಚ್ಚಿಕೊಂಡು ಹುರುಪು ತುಂಬಿದ ಕಾಲವೂ ಒಂದಿತ್ತು. ಇಂದಿಗೂ ಆ ಹಾಡುಗಳೆಂದರೆ ಏನೋ ಹೊಸತನ, ಹೊಸಯೌವನ!

ಲೋಕದ ಸೃಷ್ಟಿಗೆ ಪ್ರೀತಿಯೇ ಕಾರಣವೆನ್ನುವ ಪರಮ ಸತ್ಯವನ್ನು ಕಂಡುಕೊಂಡ ಮನುಷ್ಯ ನಿರ್ವ್ಯಾಜ, ನಿರ್ಮಲ ನಿರಂತರ ತೊರೆಯಂತಿರುವ ಅದರ ಅಂತಃಕರಣವನ್ನು ಬಗೆಯತೊಡಗಿದ. ಆಳದ ಸಂಕಟದಲ್ಲೂ ಉಕ್ಕುವ ಓಯಸಿಸ್‌ನಂತಹ ಪ್ರೇಮದ, ವಿರಹದ ನಾದವನ್ನು ಸೃಷ್ಟಿಯ ಲಯದಲ್ಲಿಯೇ ಕಂಡುಕೊಂಡ. ತಾನು ಲಯವಾದರೂ ಶಾಶ್ವತವಾಗಿ ಉಳಿವ ಪ್ರೇಮಶಾಸನವನ್ನು ಬರೆದಿಟ್ಟ. ಅಂತಹ ಪ್ರೇಮಶಾಸನ, ಸ್ಮಾರಕ, ಮಹಲುಗಳು, ದೇವಾಲಯಗಳು, ಶಾಲೆ, ಆಸ್ಪತ್ರೆ, ಅರವಟ್ಟಿಗೆ ಹತ್ತಾರಿವೆ. ಯಕ್ಷ ಯಕ್ಷಿಗೆ ಮೋಡಗಳ ಮೂಲಕ ಪ್ರೇಮಸಂದೇಶ ದಾಟಿಸಿದ ಉತ್ತರದ ಕಾವ್ಯ ಕಾಳಿದಾಸನ 'ಮೇಘದೂತ'ವೇ ಇದೆ.

ತರುಣ ಪ್ರೇಮಿಗಳ ಕೈಯಲ್ಲಿ ಸಾಮಾಜಿಕ ಜಾಲತಾಣಗಳ ಫಸ್ಟ್ ಏಡ್ ಬಾಕ್ಸ್‌ನಂತಹ ಸ್ಮಾರ್ಟ್ ಮೊಬೈಲ್‌ಗಳಿರುವ ಇಂದಿನ ಸಂದರ್ಭದಲ್ಲಿ ಪ್ರೇಮಪತ್ರ ಬರೆದು, ಪ್ರತಿಕ್ರಿಯೆಯು ಕಾಯೋ ಹಣ್ಣೋ ಎನ್ನುವ ದುಗುಡದಲ್ಲಿ ಜ್ವರ ಹತ್ತಿಸಿಕೊಂಡು ಮಲಗುವ ಸ್ಥಿತಿಯಿಲ್ಲ. ವೇದನೆಯಲ್ಲೇ ಕಾಡಿನ ತಪಸ್ಸಿಗೆ ಹೋಗೋ ಜಾಯಮಾನವೂ ಇಂದಿನದಲ್ಲ. ಒನ್‌ವೇ ಅಲ್ಲ ಪ್ರೇಮ, ನೇರ ನೆಕ್ ಟೂ ನೆಕ್. ಪ್ರೀತಿ ಕೈಗೂಡದಿದ್ದಾಗ ದ್ರಾಕ್ಷಿ ಹುಳಿ ಎಂದು ಸೋತುಹೋದ ನರಿಕಥೆಯಂತಲ್ಲ ಇಂದಿನ ವರ್ತಮಾನ. ಸ್ಟೋರೇಜ್ ಭರ್ತಿಯಾಗಿ ಪವಿತ್ರವೆನ್ನಬಹುದಾದ ಪ್ರೇಮದ ಮಾತು, ಕಥೆ, ಕವಿತೆ, ಹಾಡುಗಳೆಲ್ಲವೂ ಕ್ಷಣದಲ್ಲಿಯೇ ಡಿಲೀಟಾಗಿ ಹೋಗಿಬಿಡುತ್ತವೆ. ಮತ್ತೆ ಹೊಸ ರಾಗ ಬಂದು ಕೂಡಿಕೊಳ್ಳುತ್ತದೆ.

ಇಷ್ಟಿದ್ದರೂ ನಮ್ಮ ತರುಣ ತರುಣಿಯರು ಪ್ರೀತಿ ಹಂಚಿಕೊಳ್ಳಲು, ಸುಪ್ತ ವಿರಹವ ತಣಿಸಿಕೊಳ್ಳಲು ಪ್ರಕೃತಿಯನ್ನು ಆಯ್ಕೆಮಾಡಿಕೊಳ್ಳುವ ರೀತಿ ಖಂಡಿತ ನಮಗೆ ಮಮತೆ ಹುಟ್ಟಿಸಬೇಕು! 'ಬಳಸಿ, ಬಿಸಾಡು' ಎನ್ನುವ ಮನೋಧರ್ಮದಲ್ಲೂ ಯುವಕರು ಜಾತ್ಯತೀತವಾಗಿ ಪ್ರೀತಿಸುವುದನ್ನು, ಸಾಂಘಿಕವಾಗಿ ಬದುಕುವುದನ್ನು ನೋಡಿದರೆ ಖುಷಿಯಾಗುತ್ತದೆ. ಹೋಟೆಲ್, ರೆಸ್ಟೋರೆಂಟ್‌ಗಳಲ್ಲಿ ಕೇಕ್ ಕತ್ತರಿಸಿ ಹುಟ್ಟುಹಬ್ಬ ಆಚರಿಸುವ ಬದಲು ಕಾಲೇಜು–ವಿಶ್ವವಿದ್ಯಾಲಗಳ ಕೆಲವು ಹುಡುಗ ಹುಡುಗಿಯರು ಮರಗಿಡಗಳ ಕೆಳಗೆ ಕೇಕ್ ಕತ್ತರಿಸಿ, ಸಿಹಿ ಹಂಚಿ ಹೋಗಿರುವ ಪ್ರೀತಿಯ, ಸ್ನೇಹದ ಗುರುತುಗಳಿಗೆ ಇಲ್ಲಿ ಲೆಕ್ಕವಿಲ್ಲ.

ಬೆಂಗಳೂರಿನ ಕಬ್ಬನ್ ಪಾರ್ಕ್ ಮಾತೇಕೆ, ಒಮ್ಮೆ ನಮ್ಮ ಕರ್ನಾಟಕ ವಿಶ್ವವಿದ್ಯಾಲಯದಲ್ಲಿನ ಬಟಾನಿಕಲ್ ಗಾರ್ಡನ್ ಅನ್ನು ಬೆಳಗಿನಲ್ಲಿ ಸುತ್ತಿನೋಡಿ. ವಿಶಾಲವಾದ ಆಲದ ಮರದ ಕೆಳಗೆ, ಹಿಂದಿನ ದಿನ ಹಂಚಿ ಅಳಿದುಳಿದ ಕೇಕಿನ



